
## ಸಹೃದಯರ ಸ್ಪಂದನ

ಯಾವ ಸಾಹಿತ್ಯ ಪ್ರಕಾರ ಕೂಡ ನಮ್ಮನ್ನು ಕೇಳಿ ಹುಟ್ಟಿಕೊಳ್ಳುವುದಿಲ್ಲ. ಆಯಾ ಕಾಲದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಒತ್ತಡಗಳಿಂದ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಳ್ಳುತ್ತವೆ. ನವೋದಯವೂ ಹೀಗೆಯೇ ಹುಟ್ಟಿದ್ದು. ಇವು ಸಾಹಿತ್ಯ ಸಂದರ್ಭವನ್ನು ಶ್ರೀಮಂತಗೊಳಿಸುವಂಥವು. ಈ ಪ್ರಕ್ರಿಯೆ ಕೇವಲ ನಮ್ಮ ಸಾಹಿತ್ಯ ಸಂದರ್ಭದಲ್ಲಿ ಮಾತ್ರವಲ್ಲ, ಜಗತ್ತಿನ ಎಲ್ಲಾ ಕಡೆ ಹೀಗೆಯೇ ನಡೆದಿದೆ; ಗಾಢವಾದ ಸಂವಾದಕ್ಕೆಡೆ ಮಾಡಿಕೊಟ್ಟಿದೆ. ಈ ನೆಲೆಯಲ್ಲಿ ನವ್ಯ ಸಾಹಿತ್ಯದ ಬೆಳವಣಿಗೆಗೆ 'ಸಾಕ್ಷಿ', 'ಮನ್ವಂತರ' ರೀತಿಯ ಕಿರು ಪತ್ರಿಕೆಗಳು ವೇದಿಕೆಗಳಾಗಿದ್ದುವು.



ಜೊತೆಗೆ 'ಪ್ರಜಾವಾಣಿ'ಯಂಥ ಮಹತ್ವದ ಪತ್ರಿಕೆ ನವ್ಯ ಸಾಹಿತ್ಯದ ಬೆಳವಣಿಗೆಯಲ್ಲಿ ಮಾಡಿರುವ ಕೆಲಸ ಸ್ಮರಣೀಯವಾದದ್ದು. ಅದರಲ್ಲೂ 'ಸಾಪ್ತಾಹಿಕ ಪುರವಣಿ' ವಹಿಸಿದ ಪಾತ್ರ ಚಾರಿತ್ರಿಕವಾದದ್ದು. ಅಲ್ಲಿ ಬರುತ್ತಿದ್ದ ಕವಿತೆಗಳು, ನವ್ಯ ಕಾವ್ಯದ ಪ್ರಯೋಗ ಕುರಿತಂತೆ ನನ್ನಂಥ ಸಾವಿರಾರು ಸಾಹಿತ್ಯದ ವಿದ್ಯಾರ್ಥಿಗಳಿಗೆ ಸಾಕ್ಷೀಭೂತವಾಗಿವೆ. ಜೊತೆಗೆ ಆ ಕವಿತೆಗಳಿಗೆ ಪೂರಕವಾದ ಆರ್. ರಾಮಮೂರ್ತಿಯವರ ಕಲಾತ್ಮಕ ರೇಖಾಚಿತ್ರಗಳನ್ನು ಹೇಗೆ ಮರೆಯಲು ಸಾಧ್ಯ. ಎಷ್ಟೋ ಬಾರಿ 'ಪ್ರಜಾವಾಣಿ'ಯ ಭಾನುವಾರದ ಕವಿತೆಗಳನ್ನ ಕುರಿತು ಎಂ.ಎ ಮತ್ತು ಬಿ.ಎ. ಆನರ್ಸ್ ವಿದ್ಯಾರ್ಥಿಗಳು ಒಟ್ಟಿಗೆ ಸೇರಿ ಚರ್ಚಿಸುತ್ತಿದ್ದ ಕ್ರಮ ಅಪೂರ್ವವಾಗಿತ್ತು. ಇಂಥ ಕಾಲಘಟ್ಟದಲ್ಲಿಯೇ ಬರಗೂರು ಅವರು ಪ್ರಸ್ತಾಪಿಸಿರುವ ಎ.ಕೆ. ರಾಮಾನುಜನ್ ಅವರ 'ಹೊಕ್ಕುಳಲ್ಲಿ ಹೂವಿಲ್ಲ' ಸಂಕಲನದ ಕವಿತೆಗಳನ್ನು ರಾಮಾನುಜನ್ ವಿದೇಶದಿಂದ ಬಂದಾಗ ಓದಿನ ವ್ಯವಸ್ಥೆ ಮಾಡಿದ್ದುದು. ಅದು ಒಂದು ವಿಧದಲ್ಲಿ ಸಂಭ್ರಮ. ಅದೇ ವಿಧದಲ್ಲಿ ಬಿ.ಸಿ. ರಾಮಚಂದ್ರ ಶರ್ಮ ಅವರು ವಿದೇಶದಿಂದ ಬಂದಾಗ ಕವಿತೆಗಳ ವಾಚನ ಮತ್ತು ಚರ್ಚೆ ಇರುತ್ತಿತ್ತು. ಹೊಸದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಅತ್ಯಂತ ಉತ್ಸಾಹವಿರುತ್ತಿತ್ತು. ಈ ಉತ್ಸಾಹ ಯಾವ ಅಧ್ಯಾಪಕರೂ ಬಲವಂತವಾಗಿ ತುರುಕಿದ್ದಲ್ಲ. ಈ ಸಾಹಿತ್ಯ ಕೂಟಗಳಲ್ಲಿ ಹೊರಗಡೆಯಿಂದ ಸಾಕಷ್ಟು ಲೇಖಕರು ಮತ್ತು ಸಾಹಿತ್ಯದ ಆಸಕ್ತಿಯ ಬೇರೆ ಬೇರೆ ವಿಭಾಗಗಳ ವಿದ್ಯಾರ್ಥಿಗಳು ಬಂದು ಕೇಳಿಸಿಕೊಂಡದ್ದುಂಟು. ಬರಗೂರು ಅವರು ಹೇಳಿರುವ ರೀತಿಯಲ್ಲಿ ಅರ್ಥವಾಗದಿದ್ದರೂ ಅರ್ಥವಾದವರ ರೀತಿಯಲ್ಲಿ ಯಾರೂ ವ್ಯವಹರಿಸುವುದಿಲ್ಲ. ಇದೇ ತಾದಾತ್ಮ್ಯತೆಯಿಂದ ನಾವು ಜಿ.ಪಿ. ರಾಜರತ್ನಂ ಅವರ ಪ್ರತಿವಾರ ನಡೆಯುತ್ತಿದ್ದ ಉಪನ್ಯಾಸವನ್ನು ಕೇಳಿಸಿಕೊಂಡಿದ್ದೇವೆ. ಬರಗೂರು ಅವರು ಪ್ರಸ್ತಾಪಿಸಿರುವ 'ಗತಿಸ್ಥಿತಿ'ಯನ್ನು ಖುಷಿಯಿಂದ ಓದಿಕೊಂಡಿದ್ದೇವೆ; ಅದರ ಗದ್ಯದ ವಿಶೇಷತೆಗಾಗಿ. ಅದೇ ಆಪ್ತತೆಯಿಂದ ಶಾಂತಿನಾಥ ದೇಸಾಯಿ ಅವರ 'ಮುಕ್ತಿ', ಕುಸುಮಾಕರ ದೇವರಗೆಣ್ಣೂರ ಅವರ 'ನಾಲ್ಕನೆಯ ಆಯಾಮ', ರಾವ್ ಬಹದ್ದೂರ್ ಅವರ 'ಗ್ರಾಮಾಯಣ' ಹಾಗೂ ಲಂಕೇಶ್ ಮತ್ತು ಅನಂತಮೂರ್ತಿಯವರ ಕೃತಿಗಳನ್ನು ಓದುವ ಕ್ರಮವನ್ನು ಹೊಸ ಸಾಹಿತ್ಯ ಪ್ರಕಾರ ಕಲಿಸಿಕೊಟ್ಟಿದೆ. ಅದೇ ಸಮಯಕ್ಕೆ ತ್ರಿವೇಣಿ, ಎಂ.ಕೆ. ಇಂದಿರಾ ಅವರ ಕೃತಿಗಳನ್ನು ಓದುತ್ತಲೇ ರಾಜಲಕ್ಷ್ಮಿ ಎನ್. ರಾವ್ ಮತ್ತು ವೀಣಾ ಶಾಂತೇಶ್ವರ ಅವರ ಕೃತಿಗಳನ್ನು ಓದುವ ಸಾಧ್ಯತೆಗಳು ಬೆಳೆದವು. ನವ್ಯಸಾಹಿತ್ಯ ಅತ್ಯುತ್ತಮ ಕೃತಿಗಳ ಕಡೆಗೆ ಸಾವಿರಾರು ಓದುಗರನ್ನು ಕರೆದೊಯ್ದಿದೆ. ಯಶವಂತ ಚಿತ್ತಾಲರ ಗದ್ಯ